ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ADMIOEST(3)/17/2022

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 08.06.2022

**ಸುತ್ತೋಲೆ**

**ವಿಷಯ :** 2022-23ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿನ ಹೆಚ್ಚುವರಿ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ಪಡೆಯುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಖಾಯಂ ಬೋಧಕ ವರ್ಗದವರಿಗೆ ಬೋಧನಾ ಕಾರ್ಯಭಾರವನ್ನು ಹಂಚಿಕೆ ಮಾಡಿದ ನಂತರ ಉಳಿಯುವ ಹೆಚ್ಚುವರಿ ಕಾರ್ಯಭಾರವನ್ನು ನಿರ್ವಹಿಸಲು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ಪಡೆಯಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ 2022-23ನೇ ಶೈಕ್ಷಣಿಕ ಸಾಲಿಗೆ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಖಾಯಂ ಉಪನ್ಯಾಸಕರಿಗೆ ಬೋಧನಾ ಕಾರ್ಯಭಾರವನ್ನು ಹಂಚಿಕೆ ಮಾಡಿದ ನಂತರ ಉಳಿಯುವ ಹೆಚ್ಚುವರಿ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು, ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕನುಗುಣವಾಗಿ ಅವಶ್ಯವಿರುವ ಅರೆಕಾಲಿಕ ಉಪನ್ಯಾಸಕರ ಹುದ್ದೆಗೆ ಈ ಹಿಂದೆ ಸೇವೆ ಸಲ್ಲಿಸಿದ / ಆಸಕ್ತರಿಂದ ಸಂಸ್ಥೆಯ ಹಂತದಲ್ಲಿ ಅರ್ಜಿ ಪಡೆದು, ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ವಿಷಯಗಳ ವಿಭಾಗದ ಮುಖ್ಯಸ್ಥರು / ಹಿರಿಯ ಉಪನ್ಯಾಸಕರು ಮತ್ತು ಆಡಳಿತ ವಿಭಾಗದ ಅಧಿಕಾರಿ / ಸಿಬ್ಬಂದಿ ವರ್ಗದವರನ್ನೊಳಗೊಂಡ ಆಯ್ಕೆ ಸಮಿತಿ ರಚಿಸಿ, ಅರ್ಜಿಗಳನ್ನು ಪರಿಶೀಲಿಸಿ, ನಿಗದಿಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿರುವ ಅರೆಕಾಲಿಕ ಉಪನ್ಯಾಸಕರನ್ನು ಪ್ರಾಂಶುಪಾಲರ ಹಂತದಲ್ಲಿ ನೇಮಿಸಿಕೊಳ್ಳಲು ಕೆಳಕಂಡ ಷರತ್ತು / ನಿಬಂಧನೆಗಳಿಗೊಳಪಟ್ಟು ಅನುಮತಿ ನೀಡಲಾಗಿದೆ.

**ಷರತ್ತು / ನಿಬಂಧನೆಗಳು:-**

1. ಸದರಿ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವ ಸಂಖ್ಯಾ ಮಾಹಿತಿಯ ಗರಿಷ್ಠ ಮಿತಿಯಲ್ಲಿ ಉಪಲಬ್ದ ಕಾರ್ಯಭಾರಕ್ಕೆ ಅನುಗುಣವಾಗಿ ಮತ್ತು ಶೈಕ್ಷಣಿಕ ವೇಳಾಪಟ್ಟಿಗೆ ಅನುಗುಣವಾಗಿ ಸಿಮೀತಗೊಳಿಸಿ ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು 2022-23ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದವರೆಗೆ(ಮಾರ್ಚ್-2023) ಮಾತ್ರ ಪಡೆಯತಕ್ಕದ್ದು;
2. ಈ ಹಿಂದೆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದ ಅರೆಕಾಲಿಕ ಉಪನ್ಯಾಸಕರಿಗೆ ಆದ್ಯತೆ ನೀಡುವುದು;

3. ಅರೆಕಾಲಿಕ ಉಪನ್ಯಾಸಕರ ಸಂಖ್ಯೆಯನ್ನು ಕಡಿಮೆ ಮಾಡಬೇಕಾದ ಸಂದರ್ಭದಲ್ಲಿ, ಅರೆಕಾಲಿಕ ಉಪನ್ಯಾಸಕರಾಗಿ ಹೆಚ್ಚಿನ ಅವಧಿ ಸೇವೆ ಸಲ್ಲಿಸಿದವರಿಗೆ ಅವಕಾಶ ನೀಡಿ ಕಡಿಮೆ ಅವಧಿಯ ಸೇವೆ ಸಲ್ಲಿಸಿದವರನ್ನು ಕೈಬಿಡುವುದು.

**"ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

**ಜಂಟಿ ನಿರ್ದೇಶಕರು(ಆಡಳಿತ),**
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಇವರಿಗೆ:-

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಎಲ್ಲಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ **(ಅರೆಕಾಲಿಕ ಉಪನ್ಯಾಸಕರನ್ನು ನೇಮಿಸಿಕೊಂಡಿರುವ ಬಗ್ಗೆ ಅನುಮೋದನೆಗಾಗಿ ಒಂದು ವಾರದೊಳಗೆ ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ)**

ಪ್ರತಿ:-

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
2. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
4. ನೋಡಲ್ ಅಧಿಕಾರಿ, ಇ-ಆಡಳಿತ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು

## ಅನುಬಂಧ

## 2022-23ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಅರೆಕಾಲಿಕ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಅನುಮತಿ ನೀಡಲಾದ ಸಂಖ್ಯಾ ವಿವರ

| ಕ್ರ.ಸಂ. | ಸಂಸ್ಥೆಯ ಸಂಕೇತ | ಸಂಸ್ಥೆಯ ಹೆಸರು | ಪ್ರಸ್ತುತ ಪ್ರಾಂಶುಪಾಲರಿಗೆ ಅರೆಕಾಲಿಕ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಅನುಮತಿ ನೀಡಲಾಗುತ್ತಿರುವ ಸಂಖ್ಯೆ |
|---|---|---|---|
| **(1)** | **(2)** | **(3)** | **(4)** |
| 1. | 301 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಭಧ್ರಾವತಿ | 13 |
| 2. | 302 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ,ಮಂಗಳೂರು | 09 |
| 3. | 303 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಬಾಗಲಕೋಟೆ | 07 |
| 4. | 304 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಹುಬ್ಬಳ್ಳಿ | 07 |
| 5. | 305 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಕಲಬುರಗಿ | 04 |
| 6. | 306 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಬಳ್ಳಾರಿ | 06 |
| ಒಟ್ಟು | | | **46** |

"ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"

ಜಂಟಿ ನಿರ್ದೇಶಕರು(ಆಡಳಿತ),
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

## ನಮೂನೆ

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಸರ್ಕಾರಿ ಪಾಲಿಟೆಕ್ನಿಕ್ / ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಬೋಧಕ ಸಿಬ್ಬಂದಿ ಬೋಧನಾ ಕಾರ್ಯಭಾರವನ್ನು ಹಂಚಿಕೆ ಮಾಡಿದ ನಂತರ ಉಳಿಯುವ ಹೆಚ್ಚುವರಿ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ನೇಮಕ ಮಾಡಿಕೊಳ್ಳಲಾದ ಅರೆಕಾಲಿಕ ಉಪನ್ಯಾಸಕರಿಗೆ ಅನುಮೋದನೆ ನೀಡುವ ಕುರಿತು.

ಸಂಸ್ಥೆಯ ಹೆಸರು :

| ಕ್ರ. ಸಂ. | ವಿಭಾಗ | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ಉಪನ್ಯಾಸಕರ ವಿವರ | ಈ ಸಾಲಿಗೆ (ಸೆಮಿಸ್ಟರ್) ಪ್ರವೇಶ ಪಡೆದಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ (ವಿಭಾಗವಾರು) | ಎಐಸಿಟಿಇ ನಿಯಮ / ಇಲಾಖಾ ಆದೇಶ ಪ್ರಕಾರ ಪ್ರತಿ ವಿಭಾಗದಲ್ಲಿ ಬೋಧಿಸಬೇಕಾಗಿರುವ ಒಟ್ಟು ಯೂನಿಟ್‌ಗಳು | ಕಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ಉಪನ್ಯಾಸಕರಿಗೆ ಹಂಚಲಾಗಿರುವ ಒಟ್ಟು ಯೂನಿಟ್‌ಗಳು | ಕೊರತೆ ಬೀಳುವ ಒಟ್ಟು ಯೂನಿಟ್‌ಗಳು | ಉಳಿಕೆಯಾಗುವ ಕಾರ್ಯಭಾರಕ್ಕೆ ಅನುಗುಣವಾಗಿ ನೇಮಕಾತಿ ಮಾಡಲಾದ ಅರೆಕಾಲಿಕ ಉಪನ್ಯಾಸಕರ ಸಂಖ್ಯೆ | ಪ್ರಸ್ತುತ ನೇಮಕಾತಿ ಮಾಡಿಕೊಳ್ಳಲಾದ ಅರೆಕಾಲಿಕ ಉಪನ್ಯಾಸಕರ ಹೆಸರು | ಶೈಕ್ಷಣಿಕ ವಿದ್ಯಾರ್ಹತೆ ಹಾಗೂ ಪಡೆದ ದರ್ಜೆ | ವಯಸ್ಸು | ಅರೆಕಾಲಿಕ ಉಪನ್ಯಾಸಕರಿಗೆ ಹಂಚಲಾದ ಒಟ್ಟು ಯೂನಿಟ್‌ಗಳು | ನೇಮಕಾತಿ ಅವಧಿ | ಷರಾ |
|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| | | | | | | | | | | | | | |

ಷರಾ:- ನೇಮಕ ಮಾಡಿಕೊಂಡಿರುವ ಅರೆಕಾಲಿಕ ಉಪನ್ಯಾಸಕರ ವಿದ್ಯಾರ್ಹತೆ ದಾಖಲೆಗಳನ್ನು ಸಂಸ್ಥೆಯಲ್ಲಿಯೇ ಇರಿಸತಕ್ಕದ್ದು.

ಪ್ರಾಂಶುಪಾಲರ ದೃಢೀಕರಣ